

# ಮಳೆಗಾಲದಲ್ಲಿ ಮರದ ಫ್ಲೋರಿಂಗ್ ಆರೈಕೆ

ಮರದ ಫ್ಲೋರಿಂಗ್‌ನ ಅಧಿಕೃತ ಗುಣಮಟ್ಟವನ್ನು ದೀರ್ಘಕಾಲದವರೆಗೆ ಉಳಿಸಿಕೊಳ್ಳಲು ನಿಗದಿತ ಅವಧಿಯಲ್ಲಿ ಆರೈಕೆ ಅಗತ್ಯವಿದೆ.

■ **ಗೌರವ್ ಸರಾಫ್**

ಮನೆಗಳಲ್ಲಿ ಬೆಡ್‌ರೂಮ್ ಅಥವಾ ಡ್ರಾಯಿಂಗ್ ರೂಮ್‌ಗೆ ನೆಲದ ಫ್ಲೋರಿಂಗ್ ಮಾಡುವುದು ಈಗಿನ ಫ್ಯಾಶನ್. ಬೇಸಿಗೆ ಮತ್ತು ಮಳೆಗಾಲ ಎರಡೂ ಸಂದರ್ಭಗಳಲ್ಲಿ ಕೋಣೆ ಸಮಶೀತೋಷ್ಣ ಕಾಪಾಡಲು ಇದು ಸಹಕಾರಿ. ಮರದ ಫ್ಲೋರಿಂಗ್ ಈಗ ವೈವಿಧ್ಯಮಯ ಬಣ್ಣ, ಶೈಲಿಗಳಲ್ಲಿ ದೊರೆಯುತ್ತದೆ.

ಮಳೆಗಾಲದಲ್ಲಿ ಈ ವುಡನ್ ಫ್ಲೋರಿಂಗ್‌ಗೆ ಹೆಚ್ಚಿನ ಆರೈಕೆ ಮತ್ತು ಗಮನ ಹರಿಸಬೇಕಿದೆ. ಸಾಮಾನ್ಯವಾಗಿ ಈ ಋತುವಿನಲ್ಲಿ ಹಲವಾರು ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ಸೋರುವುದು, ತೇವ ಮತ್ತು ಪ್ರವಾಹ ಮುಂತಾದವು ಸೇರಿವೆ.

ಮರದ ಫ್ಲೋರಿಂಗ್‌ನ ಅಧಿಕೃತ ಗುಣಮಟ್ಟವನ್ನು ದೀರ್ಘಕಾಲದವರೆಗೆ ಉಳಿಸಿಕೊಳ್ಳಲು ನಿಗದಿತ ಅವಧಿಯಲ್ಲಿ ಆರೈಕೆ ಅಗತ್ಯವಿದೆ. ಲ್ಯಾಮಿನೇಟ್ ಫ್ಲೋರ್‌ಗಳನ್ನು ಶುದ್ಧ ಮಾಡುವುದು ಬಹಳ ಸುಲಭ ಹಾಗೂ ಅದಕ್ಕೆ ಕಡಿಮೆ ಶ್ರಮ ಸಾಕು. ಹಾರ್ಡ್‌ವುಡ್ ಫ್ಲೋರ್‌ಗಳಿಗೆ ಹೋಲಿಸಿದರೆ ಅದರ ಅಳವಡಿಸುವ ವೆಚ್ಚವೂ ಕಡಿಮೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ಮರದ ಫ್ಲೋರಿಂಗ್ ಹಿಗ್ಗುವುದು, ಗೀರುಗಳು ಅಥವಾ ಸೀಳುಗಳು ಉಂಟಾಗುವುದು ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಧೂಳು, ಕೊಳೆ ಸೇರಿಕೊಳ್ಳುವುದೂ ಇದೆ. ವಾತಾವರಣದಲ್ಲಿ ಹೆಚ್ಚುವ ತೇವದ ಕಾರಣದಿಂದ ಮರದ ಫ್ಲೋರಿಂಗ್ ಹಿಗ್ಗಲು ಆರಂಭವಾಗುತ್ತವೆ. ಈ ಫ್ಲೋರಿಂಗ್‌ಗೆ ಸೂಕ್ತ ರೀತಿಯಲ್ಲಿ ವ್ಯಾಕ್ಸ್ ಹಾಕುವುದಲ್ಲದೆ, ಪಾಲಿಶ್ ಮಾಡಿ ಅದನ್ನು ತೇವದಿಂದ ರಕ್ಷಿಸಬಹುದು.

ಮುಖ್ಯವಾಗಿ ರಾತ್ರಿ ಮಲಗುವ ವೇಳೆ ಎಲ್ಲಾ ಕಿಟಕಿಗಳನ್ನು ಮುಚ್ಚುವುದು ಒಳ್ಳೆಯದು. ಮಳೆ ಬಂದರೆ ಕಿಟಕಿಯ ಮೂಲಕ ನೆಲದ ಮೇಲೆ ನೀರು ಬಿದ್ದು ನೆಲಹಾಸು ಹಾಳಾಗುವ ಸಾಧ್ಯತೆ ಇದೆ. ನೆಲದೊಳಕ್ಕೆ ನೀರು ಸೋರುತ್ತಿದ್ದರೆ ತಕ್ಷಣ ಒರೆಸಿ. ನೆಲದ ಮೇಲೆ ನೀರು ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನಿಂತಿದ್ದರೆ ಅದು ನಿಮ್ಮ ಫ್ಲೋರಿಂಗನ್ನು ಹಾಳುಗೆಡಹುವುದು ಖಂಡಿತ.

ಮರದ ನೆಲಹಾಸುಗಳು ಧೂಳು ಮತ್ತು ಕಳೆ ನಿರೋಧಕವಾಗಿದ್ದರೂ ಫ್ಲೋರ್ ಬ್ರಷ್‌ಗಳು ಮತ್ತು ಫ್ಲೋರ್‌ಮ್ಯಾಟ್‌ಗಳಲ್ಲಿ ಸಿಲುಕುವ ಧೂಳು ಮತ್ತು ಮಣ್ಣಿನ ಮತ್ತು ಕಲ್ಲಿನ ಸಣ್ಣ ಕಣಗಳಿಂದ ಅವುಗಳ ಮೇಲೆ ಗೀರು ಉಂಟಾಗಬಹುದು. ಆದ್ದರಿಂದ ವ್ಯಾಕ್ಯೂಮಿಂಗ್ ಮತ್ತು ಮಾಪಿಂಗ್ (ಗುಡಿಸುವುದು ಮತ್ತು ಒರೆಸುವುದು) ಮೂಲಕ ನೆಲವನ್ನು ಆಗಾಗ್ಗೆ ಶುದ್ಧಗೊಳಿಸುವ ಅಗತ್ಯವಿದೆ.

ಮರದ ಫ್ಲೋರಿಂಗನ್ನು ಶುದ್ಧಿಗೊಳಿಸಲು ತೀಕ್ಷ್ಣ ರಾಸಾಯನಿಕಗಳುಳ್ಳ ಡಿಟರ್ಜೆಂಟ್‌ಗಳನ್ನು ಬಳಸಬಾರದು. ಮನೆಯಲ್ಲಿಯೇ ಅರ್ಧ ಕಪ್ ವಿನೆಗರ್ ಮತ್ತು ಒಂದು ಗ್ಯಾಲನ್ ನೀರು ಬಳಸಿ ಕಳೆ ತೆಗೆಯಲು ಕ್ಲೀನ್ಸಿಂಗ್ ದ್ರಾವಣ ಸಿದ್ಧಪಡಿಸಿಕೊಳ್ಳುವುದು ಅತ್ಯುತ್ತಮ ವಿಧಾನ.

ಮಂಚ, ಟೇಬಲ್, ಕುರ್ಚಿಗಳ ತಳಭಾಗದಲ್ಲಿ ರಬ್ಬರ್ ಚಕ್ರಗಳು ಮತ್ತು ಪ್ರೊಟೆಕ್ಟರ್ ಪ್ಯಾಡ್‌ಗಳನ್ನು ಅಳವಡಿಸಿ ಅವುಗಳಿಂದ ನೆಲಕ್ಕೆ ಯಾವುದೇ ಗೀರು ಉಂಟಾಗುವುದನ್ನು ತಡೆಯಬಹುದು. ಡ್ರೈಮಾಪಿಂಗ್ ಅಥವಾ ಡ್ಯಾಂಪ್ ಮಾಪಿಂಗ್‌ಗಳನ್ನು ಮಾತ್ರ ಯಾವಾಗಲೂ ಬಳಸಿ. ನೆಲದ ಮೇಲೆ ಹೆಚ್ಚಿನ ನೀರು ಸುರಿಯುವುದರಿಂದ ಫ್ಲೋರಿಂಗ್ ಮಸುಕಾಗುತ್ತದೆ.

ಲ್ಯಾಮಿನೇಟೆಡ್ ಫ್ಲೋರ್ ಅಥವಾ ಮರದ ಫ್ಲೋರಿಂಗ್‌ಗಳನ್ನು ವ್ಯಾಕ್ಸಿಂಗ್ ಅಥವಾ ಪಾಲಿಶಿಂಗ್ ಮಾಡಲು ಯಾವಾಗಲೂ ಅವುಗಳ ಉತ್ಪಾದಕರ ಅಥವಾ ವಿತರಕರ ಸಲಹೆ ಪಡೆಯಿರಿ. ಅವರ ಸಲಹೆಗಳ ಪ್ರಕಾರವೇ ಶುದ್ಧೀಕರಣ ಮಾಡುವುದು ಒಳ್ಳೆಯದು.

ಕೋಣೆಯಲ್ಲಿ ಏಸಿ ಇದ್ದರೆ ಸ್ವಲ್ಪ ಹೆಚ್ಚು ಕಾಳಜಿ ವಹಿಸಬೇಕಾಗುತ್ತದೆ. ಮುಂಗಾರಿನಲ್ಲಿ ಹಗಲಿನ ವೇಳೆ ಕೋಣೆಯಲ್ಲಿ ಸಾಕಷ್ಟು ಗಾಳಿಯಾಡುವಂತೆ ನೋಡಿಕೊಳ್ಳಿ. ತಾಜಾ ಗಾಳಿ ಮನೆಯೊಳಗೆ ಬಂದರೆ ಕೋಣೆಯ ವಾತಾವರಣ ತೀರಾ ತೇವವಾಗಿರುವುದಿಲ್ಲ. ನೆಲದ ಮರದ ಫ್ಲೋರಿಂಗ್ ಹೆಚ್ಚು ತೇವದಲ್ಲಿ ಕೆಡುವುದು ಬೇಗ.

(ಲೇಖಕರು ಸ್ಕ್ವೇರ್ ಫೂಟ್ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕರು)

■